ಕರ್ನಾಟಕ ವಿಧಾನಸಭೆ

ಗುರುವಾರ 20ನೇ ಏಪ್ರಿಲ್ 2000ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 10-30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ. ವಿ. ವೆಂಕಟಪ್ಪ) ಅವರು,

ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ಆರ್. ಡಿ. ಪಿ. ಆರ್. ಕಾರ್ಯದರ್ಶಿಯವರ ನಡವಳಿಕೆ ಕುರಿತು

ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಇವತ್ತಿನ ಕಾರ್ಯಕಲಾಪಗಳಲ್ಲಿ ಪ್ರಶ್ನೋತ್ತರವಾದ ನಂತರ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಹಾಗೂ ಉತ್ತರ ಇದೆಯೆಂದು ಹೇಳಿದ್ದೀರಿ. ನಾವು ಈ ಸದನದಲ್ಲಿ ಅನೇಕ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಮತ್ತು ಸರ್ಕಾರದಿಂದ ರಾಜ್ಯದ ಜನತೆಗೆ ಇದರಿಂದ ಏನಾದರೂ ಅನುಕೂಲ ಮಾಡಬೇಕೆಂದು ಇಲ್ಲಿಗೆ ಬಂದಿದ್ದೇವೆ. ಇಡೀ ರಾಜ್ಯದಲ್ಲಿ ಇವತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಜನರ ತಲೆಯ ಮೇಲೆ ಬಂಡೆ ಎಳೆಯುವಂಥಾದ್ದಕ್ಕೆ ಆಡಳಿತ ಪಕ್ಷದವರು ಹೊರಟಿದ್ದಾರೆ. ಈ ರಿಸರ್ವೇಷನ್ ವಿಚಾರದಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿ ಮನಸ್ಸೋ ಇಚ್ಛೆ ನಡೆಸುವಂಥಾದ್ದಕ್ಕೆ ಇವರು ಹೊರಟಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡಬೇಕೆಂದು ನಾವು ನಿಯಮ 69ರ ಅಡಿಯಲ್ಲಿ ತಮಗೆ ಮನವಿಯನ್ನು ಮಾಡಿಕೊಂಡಿದ್ದೆವು. ಈ ನಿಲುವಳಿ ಸೂಚನೆಯಲ್ಲಿ ಕಾನೂನು ಪ್ರಕಾರವಾಗಿ ಇದಕ್ಕೆ ಅವಕಾಶ ಇದೆ. ಅದಕ್ಕೋಸ್ಕರ ನಾನು ತಮ್ಮ ಜೊತೆಗೆ ಖಾಸಗಿಯಾಗಿ ತಮ್ಮ ಕಛೇರಿಯಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಇದನ್ನು ನಿಯಮ 69ರ ಅಡಿಯಲ್ಲಿ ತೆಗೆದುಕೊಂಡು ಚರ್ಚೆಗೆ ಅವಕಾಶ ಮಾಡಿಕೊಡೋಣವೆಂದು ತಾವು ಹೇಳಿದಿರಿ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರ ಅಪ್ಪಣೆಯೂ ಸಹ ದೊರೆಯಿತು, ಮತ್ತೆ ಮಂತ್ರಿಯವರು 'ಆರ್. ಡಿ. ಪಿ. ಆರ್. ಸೆಕ್ರೆಟರಿಯವರನ್ನು ನೋಡಿ ಹೋಗ್ರಿ' ಎಂದು ಅಹಂಕಾರದ ಮಾತನ್ನು ಹೇಳಿದ್ದಾರೆ. ತಮಗೆ ಇದನ್ನು ಈ ಸದನದಲ್ಲಿ ಅವರು ಹೇಳಿದ್ದಾರೆ, ಇದರಿಂದ ನಮ್ಮ ಮನಸ್ಸಿಗೆ ಎಷ್ಟು ನೋವಾಗಿದೆ ಎಂದರೆ ಹದಿನೆಂಟು ವರ್ಷಗಳ ನಮ್ಮ ರಾಜಕೀಯ ಜೀವನದಲ್ಲಿ ಇವತ್ತು ಈ ರೀತಿ ಒಬ್ಬ ಮಂತ್ರಿಗಳು, ಶಾಸಕನಿಗೆ ಕನಿಷ್ಟ ಪಕ್ಷ ಗೌರವವನ್ನು ಕೊಡದಿರುವಂತಹ ಮಟ್ಟಕ್ಕೆ ಈ ಸದನದಲ್ಲಿ ನನ್ನ ಯೋಗ್ಯತೆ ಹೋಗಿದೆ ಎಂದರೆ ಇದಕ್ಕೆ ನಾನು ಯಾವ ರೀತಿಯಾಗಿ ಪಶ್ಚಾತ್ತಾಪ ಪಡಬೇಕೆಂದು ಕಾಣುತ್ತಿಲ್ಲ. ನಾನು ರಾತ್ರಿಯೆಲ್ಲಾ ನಿದ್ದೆಯಿಲ್ಲದೇ ಬಹಳ ಯೋಚನೆ ಮಾಡಿದೆ, ನಾನು ಏನು ತಪ್ಪು ಮಾಡಿದ್ದೇನೆಂದು ನನಗೆ ಈ ತರಹ ಆಗಿದೆ? ಎಂದು ಆಡಳಿತ ಪಕ್ಷದ ಶಾಸಕರು ಮತ್ತು ಮಂತ್ರಿಗಳು ನಮ್ಮ ಹತ್ತಿರ ಬಂದು ಈ ರಿಸರ್ವೇಷನ್ ಆಗಿರುವಂಥಾದ್ದು ಸರಿಯಾಗಿಲ್ಲವೆಂದು ನಮಗೆ ಹೇಳುತ್ತಾರೆ. ಅವರು ಜವಾನನಿಗೆ ಹೇಳುವ ರೀತಿಯಲ್ಲಿ 'ಕಾರ್ಯದರ್ಶಿಯವರನ್ನು ಹೋಗಿ ನೋಡಿ,' ಎಂದು ಹೇಳಿದ ಮೇಲೆ ಇಲ್ಲಿ ನಮ್ಮ ಮರ್ಯಾದೆ ಏನು ಉಳಿಯಿತು? ಎಂಬುದು ನನಗೆ ಗೊತ್ತಿಲ್ಲ. ನಾನು ಈ ರೂಲ್ಸ್

ಅನ್ನು ಪ್ರಿವಿಲೇಜ್ ಕಮಿಟಿಯ ಮುಂದೆ ತರುವುದಕ್ಕೂ ಸಹಿತ ವಿಚಾರ ಮಾಡುತ್ತಿದ್ದೇನೆ. It amounts to privilege ಎನ್ನತಕ್ಕಂಥಾದ್ದು ಇದು ನನ್ನ ಮನಸ್ಸಿಗೆ ಬಂದಿದೆ. ಮಾನ್ಯ ರಂಗನಾಥರವರೆ, ತಾವು ಹಿರಿಯ ಸದಸ್ಯರಾಗಿದ್ದೀರಿ. ತಮ್ಮ ಬಗ್ಗೆ ನಾವು ವೈಯಕ್ತಿಕವಾಗಿ ಗೌರವವನ್ನು ಇಟ್ಟುಕೊಂಡಿದ್ದೇವೆ. ನಾವು ಮಾನ - ಮರ್ಯಾದೆಯನ್ನು ಬಿಟ್ಟು ರಾಜಕೀಯವನ್ನು ಮಾಡುವುದಕ್ಕೆ ಬಂದಿಲ್ಲ. ನಾವು ಮಾನ - ಮರ್ಯಾದೆಯನ್ನು ಇಟ್ಟುಕೊಂಡು ಅದರ ನಂತರ ಈ ರಾಜಕೀಯ ನಮಗೆ ಬೇಕೆ ವಿನಃ ಮರ್ಯಾದೆಯನ್ನು ಬಿಟ್ಟು ರಾಜಕೀಯ ಮಾಡುವುದಕ್ಕೆ ನಾವು ತಯಾರಿಲ್ಲ. ಆ ರೀತಿ ಇದ್ದರೆ ನಾವು ಈ ಸದನದಿಂದ ಎದ್ದು ಹೋಗುತ್ತೇವೆ. ಈಗ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ, ಇದೇ ನಮ್ಮ ಉತ್ತರ ಎಂದು ಅವರು ಹೇಳಿಬಿಟ್ಟರು. ಈಗ ನಾವು ಏನು ಮಾಡಬೇಕೆಂಬುದು ನಮಗೆ ಗೊತ್ತಾಗುತ್ತಿಲ್ಲ. ಇಡೀ ರಾಜ್ಯದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಇದೆ, ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಅದಕ್ಕೂ ಇಲ್ಲಿ ಅವಕಾಶವಿಲ್ಲ. ನಾವು ಏನಾದರೂ ಮಾತನಾಡುವುದಕ್ಕೆ ಹೋದರೆ ಮುಂದುಗಡೆ ಇರುವಂಥವರು ನೀವು ಎಲ್ಲವನ್ನೂ ಮಾತನಾಡುತ್ತೀರಿ, ಎಂದು ಹೇಳುತ್ತೀರಿ. ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಎಂ. ವೀರಪ್ಪ ಮೊಯಿಲಿಯವರು, ಮಾನ್ಯ ಬಂಗಾರಪ್ಪನವರು, ಇಲ್ಲಿ ಈ ಕಡೆ ಕುಳಿತಿದ್ದಂತಹ ಸಂದರ್ಭದಲ್ಲಿ, ಅವರುಗಳು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಒಂದು ದಿವಸ, ಎರಡು ದಿವಸ ಮಾತನಾಡಿದ್ದಾರೆ. ಇವತ್ತು ಇವರು ನೂರು ದಿವಸಗಳ ಅಧಿವೇಶನವನ್ನು ನಡೆಸುತ್ತೇವೆಂದು ಹೇಳುತ್ತಾರೆ. ಇವರು ನೂರು ದಿವಸಗಳು ಏನು ಅಧಿವೇಶನವನ್ನು ನಡೆಸುವುದು? ಆ ವಿಚಾರಗಳ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶವಿಲ್ಲವೆಂದರೆ ಹೇಗೆ? ರಾಜ್ಯದಲ್ಲಿ ಜನರು ಕುಡಿಯುವ ನೀರಿಗೋಸ್ಕರ ಒದ್ದಾಡುತ್ತಿದ್ದಾರೆ. ನಿನ್ನೆ ನಾನು ಮಾನ್ಯ ಕಾಗೋಡು ತಿಮ್ಮಪ್ಪನವರ ಜೊತೆಗೆ ಮಾತನಾಡುವಾಗ ನನ್ನದು ಒಂದು ತಪ್ಪಾಗಿದೆ. ನಾನು ಮತ್ತು ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಗೌರವಾನ್ವಿತ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಆಗಿರುವಂತಹ ಮಾನ್ಯ ಕಾಗೋಡು ತಿಮ್ಮಪ್ಪನವರ ಜೊತೆಯಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ, ನಾಳೆ ಮಾನ್ಯ ಮುಖ್ಯಮಂತ್ರಿಯವರ ಉತ್ತರವಿರುವುದಿಲ್ಲ: ಇನ್ನೂ ರಾಜ್ಯಪಾಲರ ಭಾಷಣದ ಮೇಲೆ ಎಲ್ಲಾ ಸದಸ್ಯರುಗಳು ಮಾತನಾಡುವಂಥಾದ್ದು ಇದೆ, ಆಡಳಿತ ಪಕ್ಷದ ಸದಸ್ಯರುಗಳು ಮತ್ತು ಸಾಧ್ಯವಾದರೆ ವಿರೋಧಪಕ್ಷದ ಸದಸ್ಯರುಗಳು ಇನ್ನೂ ಸಹಿತ ಮಾತನಾಡಬೇಕೆಂದು ಇದೆ, ಆದುದರಿಂದ, ಮಾನ್ಯ ಮುಖ್ಯಮಂತ್ರಿಯವರು ನಾಳೆ ಉತ್ತರವನ್ನು ಕೊಡುವುದು ಬೇಡ. ಅವರು ಸೋಮವಾರ ಉತ್ತರ ಕೊಡಲಿ ಎಂದು ಹೇಳಿದರು. ಇದಲ್ಲದೆ ನಾನು ಇದನ್ನೆಲ್ಲಾ ಬಿ. ಎ. ಸಿ. ಕಮಿಟಿಯಲ್ಲಿ ಚರ್ಚೆ ಮಾಡಬೇಕೆಂದರೆ, ಮಾನ್ಯ ಮುಖ್ಯಮಂತ್ರಿಯವರು ಬರುವುದೇ ಅಪರೂಪ, ಅವರು ಬಂದರೆ ನಮ್ಮ ಪುಣ್ಯ: ಅಲ್ಲಿ ಆಗುವಂತಹ ವ್ಯವಹಾರಗಳು ಇಲ್ಲಿ ಕಾರ್ಯಾಚರಣೆಯಾಗುತ್ತಿಲ್ಲ, ಜನರು ನಮ್ಮನ್ನು ಅಪಹಾಸ್ಯ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ವಿರೋಧ ಪಕ್ಷದವರು ಯಾರೂ ಏನೂ ಚರ್ಚೆ ಮಾಡುವುದಿಲ್ಲ, ಅವರು ಜನರ ಸಮಸ್ಯೆಗಳನ್ನು ಕೇಳುತ್ತಾ ಇಲ್ಲ, ನೀವು ಏಕೆ ಅಲ್ಲಿ ಇದ್ದೀರಾ? ಎಂದು ನಮ್ಮನ್ನು ಕೇಳುವಂಥಾದ್ದು ಇದೆ. ಆದುದರಿಂದ, ದಯಮಾಡಿ ತಮ್ಮ ಮನಸ್ಸಿನೊಳಗೆ ನಮ್ಮ ಬಗ್ಗೆ ಕರುಣೆ ಇದ್ದರೆ ನಮಗೆಲ್ಲ ಮಾತನಾಡುವುದಕ್ಕೆ ಕನಿಷ್ಠಪಕ್ಷ ಅವಕಾಶವನ್ನು ಕೊಟ್ಟು ನಂತರ ಅವರು ಏನು ಬೇಕಾದರೂ ಮಾಡಿಕೊಳ್ಳಲಿ, ನಿಯಮ 180

ಇದ್ದಂತಹ ಸಂದರ್ಭದಲ್ಲಿ ಏನಾಯಿತು? ನಮಗೆ ಎನಾಯಿತು? ಎಂಬುದನ್ನೆಲ್ಲಾ ನಾವು ನೋಡಿದ್ದೇವೆ. ಆದರೆ, ಈ ರೀತಿಯಲ್ಲಿ ಒಬ್ಬ ಮನುಷ್ಯನನ್ನು ಅದು ಪ್ರಾಣಿಯಂತೂ ಅಲ್ಲ, ಈಗ "ಪ್ರಾಣಿ ದಯಾ ಸಂಘ" ಎಂದು ಬಂದಿದೆ, ಪ್ರಾಣಿಗಳ ಬಗ್ಗೆ ದಯೆ ಇರಬೇಕಂತೆ. ಆದರೆ, ಒಬ್ಬ ಚುನಾಯಿತ ಶಾಸಕರಿಗೆ 'ಸೆಕ್ರೆಟರಿಯವರನ್ನು ಬೇಕಾದರೆ ಹೋಗಿ ನೋಡಿ' ಎಂದು ಹೇಳುವಂತಹ ಮಟ್ಟಕ್ಕೆ ಬಂದರೆ ಆ ಪ್ರಾಣಿಗಳಲ್ಲಿರತಕ್ಕಂತಹ ದಯೆ ಇವರಲ್ಲಿ ನಮ್ಮ ಬಗ್ಗೆ ಇಲ್ಲ. ಅದೂ ನನ್ನ ಬಗ್ಗೆ ಹೀಗೆ ಏಕೆ? ಎಂದು ಅದು ನನಗೆ ಅರ್ಥವಾಗುತ್ತಿಲ್ಲ. ನಾನು ಇದನ್ನು ಬಹಳ ನೊಂದು ಹೇಳುತ್ತಿದ್ದೇನೆ. ನನಗೇ ಹೀಗೆ ಆದರೆ ಇನ್ನು ಆಡಳಿತ ಪಕ್ಷದ ಶಾಸಕರ ಗತಿ ಈ ಪವರ್ ಆರೋಗೆನ್ಸ್‌ನಿಂದ ಯಾವ ಮಟ್ಟಕ್ಕೆ ಹೋಗಬಹುದು ಎಂಬುದನ್ನು ತಾವು ಯೋಚನೆ ಮಾಡಿ. ಆದುದರಿಂದ, ಮಾನ್ಯ ಮುಖ್ಯಮಂತ್ರಿಯವರ ಉತ್ತರ ಇವತ್ತು ಆಗುತ್ತದೆಂದರೆ ನಾವು ರಾಜ್ಯಪಾಲರ ಭಾಷಣದ ಮೇಲೆ ಯಾರೂ ಮಾತನಾಡುವುದು ಬೇಡವೇ? ನಮ್ಮ ನಮ್ಮ ಕ್ಷೇತ್ರಗಳ ಸಮಸ್ಯೆಗಳನ್ನು ಹಾಗೂ ಈ ರಾಜ್ಯದ ಸಮಸ್ಯೆಗಳನ್ನು ನಾವಿಲ್ಲಿ ಮಾತನಾಡುವುದು ಬೇಡವೆ? ನಮಗೆ ಅಪಹಾಸ್ಯ ಮಾಡುವ ರೀತಿಯಲ್ಲಾದರೆ ನಮಗೆ ಬೇರೆ ಮಾರ್ಗವಿಲ್ಲ, ನಮಗೆ ಶಕ್ತಿ ಇಲ್ಲ; ನಿಮಗೆ ಜನರು ಓಟು ಕೊಟ್ಟಿದ್ದಾರೆ, ನೀವು ಏನು ಬೇಕಾದರೂ ಮಾತನಾಡಬಹುದು, ಏನು ಬೇಕಾದರೂ ಮಾಡಬಹುದು, ಮಾಡಿಕೊಂಡು ಹೋಗಿ, ಯಾರು ಬೇಡವೆಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ತಾವು ನಮ್ಮ ಪ್ರೊಟೆಕ್ಷನ್‌ಗೆ ಬರಬೇಕೆಂದು ಹೇಳುತ್ತೇನೆ. ತಮ್ಮಲ್ಲಿ ಅಪಾರವಾದ ಕರುಣೆ ಇದೆ, ನಮ್ಮ ಬಗ್ಗೆ ತಾವು ಕೃಪಾಕಟಾಕ್ಷವನ್ನು ತೋರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ ಮತ್ತು ಪರಿಸರ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪಿ. ಜಿ. ಆರ್. ಸಿಂಧ್ಯರವರ ಅಭಿಪ್ರಾಯವನ್ನು, ಅವರ ನೋವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ, ನಾನು ಕೂಡ ನಿನ್ನೆ ಸದನದಲ್ಲಿ ಇದ್ದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ತಾವೇ ಲೆಕ್ಕ ಹಾಕಿಕೊಳ್ಳಿ, ನಾನು ಹೋಗಿ ಆ ಪ್ರೈವೇಟ್ ಸೆಕ್ರೆಟರಿಯವರನ್ನು, ಸೆಕ್ರೆಟರಿಯವರನ್ನು ನೋಡಬೇಕೆಂದರೆ What is the signal that he is giving to the officers about legislator? ಆ ಆಫೀಸರ್‌ಗೆ ಬೆಳಿಗ್ಗೆ ಫೋನ್ ಮಾಡಿದರೆ ಸ್ನಾನ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಮತ್ತೆ 10.30 ಗಂಟೆಗೆ ಫೋನ್ ಮಾಡಿದರೆ ಮೀಟಿಂಗ್‌ನಲ್ಲಿದ್ದಾರೆಂದು ಹೇಳುತ್ತಾರೆ. ಪುನಃ ನಾಲ್ಕುವರೆ ಗಂಟೆಗೆ ಫೋನ್ ಮಾಡಿದರೆ ಯಾರ ಜೊತೆಗೋ ಮೀಟಿಂಗ್‌ನಲ್ಲಿದ್ದಾರೆ, ಮಂತ್ರಿಗಳ ಮನೆಗೆ ಹೋಗಿದ್ದಾರೆಂದು ಹೇಳುತ್ತಾರೆ. ನಾವು ಮಂತ್ರಿಗಳ ಮನೆಗೆ ಹೋದರೆ ಅವರು ಟೂರ್‌ನಲ್ಲಿರುತ್ತಾರೆ. ಹೀಗಾಗಿ What is the signal that he is giving to the officers about legislator?

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ನೋವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ, ನಿನ್ನೆ ಇಲ್ಲಿ ಈ ವಿಷಮ ಘಟನೆ ನಡೆದಂತಹ ಸಂದರ್ಭದಲ್ಲಿ ನಾನೂ ಕೂಡ ಸದನದಲ್ಲಿ ಇದ್ದೆ. ನಾನು ಮಾನ್ಯ ಸದಸ್ಯರ ಸ್ಥಾನಮಾನಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ನನ್ನ ಸಹೋದ್ಯೋಗಿ ಮಂತ್ರಿಯವರು ಉದ್ದೇಶಪೂರ್ವಕವಾಗಿ ಈ ಮಾತನ್ನು ಆಡಿದರೆನ್ನುವಂತಹ ಭಾವನೆ ನನಗಿಲ್ಲ. ಆದರೆ, ಬಹಳ ಮಟ್ಟಿಗೆ ಅವರ ಅಭಿಪ್ರಾಯವೇನಿತ್ತು

ಎಂದರೆ ಒಂದು ವೇಳೆ ಇದು ಸೆಕ್ರೆಟರಿಯವರಿಗೆ ತಿಳಿಯಬಹುದೆಂಬ ಭಾವನೆ ಅವರಿಗಿತ್ತು. ಆದರೆ ಅದು ತಪ್ಪು ಎಂದು ನನಗೂ ಅರ್ಥವಾಗುತ್ತದೆ. ಆದುದರಿಂದ, ನಾನು ನನ್ನ ಸಹೋದ್ಯೋಗಿ ಮಂತ್ರಿಯವರ ಪರವಾಗಿ ಈ ಸದನಕ್ಕೆ ಕ್ಷಮೆಯನ್ನು ಕೇಳುತ್ತೇನೆ. ಮಾನ್ಯ ಸಿಂಧ್ಯರವರ ಮನಸ್ಸಿಗೆ ನೋವಾಗಿರುವುದನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಅವರು ಇದನ್ನು ಮರೆತು ಬಿಡುವುದು ಒಳ್ಳೆಯದು, ಇದನ್ನು ಮತ್ತೆ ಮುಂದುವರೆಸುವಂಥಾದ್ದು ಸರಿಯಲ್ಲ. ನೀವು ನನ್ನ ಜೊತೆಗೆ ಚರ್ಚೆ ಮಾಡಿ ಎಂದು ಅವರು ಹೇಳಿದ್ದರೆ ಆಗುತ್ತಿತ್ತು, ಆದರೆ, ಅದರ ಬದಲು ಈ ರೀತಿಯಾಗಿದೆ. ಆದರೂ ಇದನ್ನು ಅವರು ಬುದ್ಧಿ ಪೂರ್ವಕವಾಗಿ ಆಡಿದ್ದಾರೆಂದು ನಾನು ಅರ್ಥೈಸುವುದಕ್ಕೆ ಇಚ್ಛಿಪಡುವುದಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರ ಹಾಗೂ ಈ ಮಂತ್ರಿಮಂಡಲದ ಪರವಾಗಿ ನಿಮ್ಮೆಲ್ಲರ ಕ್ಷಮೆಯನ್ನು ಕೇಳುತ್ತಿದ್ದೇನೆ, ಇದನ್ನು ಇಲ್ಲಿಗೇ ಬಿಡುವಂಥಾದ್ದು ಒಳ್ಳೆಯದು, ಮತ್ತೆ ಮುಂದುವರೆಸುವುದು ಬೇಡ ಇದರಲ್ಲಿ ಕೆಲವು ದೋಷಗಳು ಇವೆ, ಅದನ್ನು ಪರಿಹಾರ ಮಾಡಬೇಕಾಗುತ್ತದೆ, ನೋಟಿಫಿಕೇಶನ್ ಇಷ್ಯೂ ಮಾಡುವುದಕ್ಕಿಂತ ಮುಂಚೆ ಸದನದ ಎಲ್ಲಾ ಸದಸ್ಯರು ಕೂಡ ಅದನ್ನು ಸರ್ಕಾರದ ಗಮನಕ್ಕೆ ತಂದು ಆಯಾ ಕ್ಷೇತ್ರಗಳಲ್ಲಿ ಮಾಡಬೇಕೆನ್ನುವಂಥಾದ್ದು ಇದೆ, ಕೆಲವು ಕಡೆ ತಪ್ಪು ಆಗಿದೆ. ಮಾನ್ಯ ಅಧ್ಯಕ್ಷರೆ, 2-3 ಕ್ಷೇತ್ರಗಳಲ್ಲಿ, ತಾಲ್ಲೂಕುಗಳಲ್ಲಿ ಒಂದು ಕ್ಷೇತ್ರದಲ್ಲಿರುವಂಥಾದ್ದನ್ನು ನಾವು ನೋಡಿದ್ದೇವೆ. ಹಾಗಾಗಿ ಎರಡಕ್ಕಿಂತ ಹೆಚ್ಚು ರಿಸರ್ವೇಷನ್ ಬಂದಿರುವಂಥಾದ್ದನ್ನು ನಾವು ನೋಡಿದ್ದೇವೆ. ಅದಕ್ಕೆ ಒಂದು ಪರಿಹಾರವನ್ನು ಮಾಡಬೇಕೆಂದು ಅದು ಸರ್ಕಾರದ ಗಮನದಲ್ಲೂ ಕೂಡ ಇದೆ ಎನ್ನುವಂತಹ ಮಾತನ್ನು ನಾನು ಹೇಳಲಿಚ್ಛಿಸುತ್ತೇನೆ. ನಾನು ಇಷ್ಟನ್ನು ಹೇಳುತ್ತಾ ಮತ್ತೆ ಇದನ್ನು ಇಲ್ಲಿ ಮುಂದುವರೆಸದೇ ಇಲ್ಲಿಗೆ ಬಿಡಬೇಕೆಂದು ನಿಮ್ಮೆಲ್ಲರಲ್ಲಿ ಕೇಳಿಕೊಳ್ಳುತ್ತೇನೆ. ಇದು ಬುದ್ಧಿಪೂರ್ವಕವಾಗಿ ನಡೆದಿಲ್ಲ ಎನ್ನುವಂಥಾದ್ದು ಮತ್ತೆ ನನಗೂ ಅರ್ಥವಾಗುತ್ತಿದೆ. ಈ ಮಾತು ಬಂದಾಗ ನಾನು ಸಹ ಸದನದಲ್ಲಿದ್ದೆ. ನಾನು ಸಹ ಕೇಳಿಸಿಕೊಂಡಿದ್ದೇನೆ, ಏನಾದರೂ ಸಮಸ್ಯೆ ಆದರೆ ಬನ್ನಿ ಪರಿಹಾರ ಮಾಡುತ್ತೇವೆಂದು ಹೇಳುವುದು ಮಂತ್ರಿಮಂಡಲದ ಸೌಜನ್ಯವಾಗುತ್ತದೆ. ಆ ದೃಷ್ಟಿಯಿಂದ ನಾವು ನಡೆಸಿಕೊಂಡು ಹೋಗುತ್ತೇವೆನ್ನುವ ಮಾತನ್ನು ಹೇಳುತ್ತಾ, ಈ ಸರ್ಕಾರ ನಿರ್ದಯದಿಂದ ಕೂಡಿಲ್ಲ, ಸಾರ್ವಜನಿಕರ ಅಭಿಪ್ರಾಯಕ್ಕೆ ಮಾನ್ಯತೆ ಕೊಡಬಾರದು, ನಿಮ್ಮ ಅಭಿಪ್ರಾಯಕ್ಕೆ ಮನ್ನಣೆ ಕೊಡಬಾರದೆಂದು ಈ ಸರ್ಕಾರಕ್ಕಾಗಲೀ, ಮಂತ್ರಿಗಳಿಗಾಗಲೀ ಯಾರಿಗೂ ಆ ಭಾವನೆ ಇಲ್ಲ. ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ಸಿಂಧ್ಯರವರು ಈ ವಿಷಯವನ್ನು ಮನಸ್ಸಿಗೆ ತೆಗೆದುಕೊಂಡು ನನಗೆ ರಾತ್ರಿಯೆಲ್ಲಾ ನಿದ್ರೆ ಇಲ್ಲವೆನ್ನುವಂತಹ ಮಾತನ್ನು ಆಡಿದರು. ತುಂಬಾ ಸೆನ್ಸಿಟಿವ್ ಆಗಿರುವವರಿಗೆ ಮಾತ್ರ ಈ ರೀತಿಯಾಗುತ್ತದೆ. ಆದುದರಿಂದ ಯಾರೂ ಸಹ ಇದನ್ನು ತೀರಾ ತಲೆಗೆ ಹಚ್ಚಿಕೊಳ್ಳಬಾರದೆನ್ನುವಂತಹ ಮಾತನ್ನು ಹೇಳುತ್ತಾ, ಇದನ್ನು ಇಷ್ಟಕ್ಕೆ ನಿಲ್ಲಿಸೋಣವೆಂದು ತಮ್ಮಲ್ಲಿ ಮತ್ತೊಮ್ಮೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು. ನಾನು ನಿನ್ನೆಯಿಂದ ನೋಡುತ್ತಿದ್ದೆ. ಅವರ ಒಂದು ಮನೋವ್ಯಾಕುಲತೆಯನ್ನು ಗಮನಿಸುತ್ತಿದ್ದೆ. ಅದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ನನ್ನ ಮನಸ್ಸಿನಲ್ಲಿ ಇತ್ತು. ಈ ವಿಷಯವಾಗಿ ಮಾನ್ಯ ಸಿಂಧ್ಯರವರು ಮಾತನಾಡಿದರು. ನಿನ್ನೆ

ಚರ್ಚೆಗೆ ಅವಕಾಶ ಕೊಡಬೇಕು ಎನ್ನುವಂತಹ ಸಂದರ್ಭದಲ್ಲಿ ನಡೆದಂತಹ ವಿಚಾರವಾಗಿ ಮಾನ್ಯ ಹಿರಿಯ ಸಚಿವರಾದಂತಹ ರಂಗನಾಥ್‌ರವರು ಬಹಳ ವಿಶಾಲ ಮನೋಭಾವವನ್ನು ಹಾಗೂ ಹೃದಯ ವೈಶಾಲ್ಯತೆಯನ್ನು ತೋರಿಸಿದರು; ಎಲ್ಲಿ ತಪ್ಪಾಗಿದೆ ಏನಾಗಿದೆ ಎಂದು ವಿಚಾರ ಮಾಡಿ ಅವರು ಅದರ ಬಗ್ಗೆ ಈ ಸದನದ ಕ್ಷಮಾಪಣೆಯನ್ನು ಕೇಳುತ್ತೇನೆಂದು ಹೇಳಿ ತಮ್ಮ ಹೃದಯ ವೈಶಾಲ್ಯತೆಯನ್ನು ತೋರಿಸಿದರು. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸಹ ಹಿರಿಯರು, ಇಷ್ಟು ವರ್ಷಗಳ ಕಾಲ ಅವರು ಇದೇ ಸದನದಲ್ಲಿ ಕೆಲಸ ಮಾಡಿಕೊಂಡು ಬಂದಂತಹವರು, ಹಲವಾರು ಖಾತೆಗಳನ್ನು ಹೊಂದಿ ಕೆಲಸ ಮಾಡಿದಂತಹವರು; ಅವರ ಬಾಯಿಯಿಂದ ಏಕೆ ಹೀಗೆ ಮಾತುಗಳು ಬಂತು? ಅವರ ಮನಸ್ಸಿನಲ್ಲಿ ಏನಿದೆಯೋ ಅದು ಗೊತ್ತಾಗಲಿಲ್ಲ. ಮಾನ್ಯ ರಂಗನಾಥ ಅವರು ಮನಸ್ಸಿನಲ್ಲಿ ಏನಿತ್ತು ಅದನ್ನು ಹೇಳಿಬಿಟ್ಟರು; ಇದು ಏನಾಗಿದೆ, ಈ ರೀತಿ ಆಗಬಾರದಿತ್ತು ಎಂದು ಸಹ ಹೇಳಿದರು. ಆದರೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಮನಸ್ಸಿನಲ್ಲಿ ಏನಿತ್ತು? ಅವರು ಹೀಗೆ ಏಕೆ ಮಾತನಾಡಿದರು? ಅದರ ಹಿನ್ನೆಲೆ ಏನು? ಏಕೆಂದರೆ ಮಾನ್ಯ ಸಿಂಧ್ಯರವರು ಆರು ಸಲ ಶಾಸಕರಾಗಿ ಆರಿಸಿ ಬಂದವರು. ಹಲವಾರು ಪ್ರಮುಖ ಖಾತೆಗಳನ್ನು ಹೊಂದಿ ಸಚಿವರಾಗಿ ಕೆಲಸ ಮಾಡಿದಂತಹವರು. ಈ ಸದನದಲ್ಲಿ ಎಲ್ಲಾ ವಿಷಯಗಳ ಬಗ್ಗೆ ಅಮೂಲಾಗ್ರವಾಗಿ ಚರ್ಚಿಸಿ ನೋಡಿದಂತಹವರು. ಅಂತಹವರ ಮನಸ್ಸಿಗೆ ಇವತ್ತು ಮನೋವ್ಯಾಕುಲತೆ ಉಂಟಾಗುವಂತಹ ಘಟನೆಯಾಗಿದೆ. ಇಲ್ಲಿ ಸಾಕಷ್ಟು ಹೊಸ ಶಾಸಕರು ಬಂದಿದ್ದಾರೆ. ಇದರಿಂದ ಅವರಿಗೆ ಇಲ್ಲಿ ನಾವು ಯಾವ ರೀತಿ ಕೆಲಸ ಮಾಡಬೇಕೆನ್ನುವ ಭಾವನೆ ಬರುತ್ತದೆ. ನಿನ್ನೆ ಅವರು ಮಾತನಾಡಿದಾಗ ಅಧಿಕಾರಿಗಳಿಗೆ ಯಾವ ಸಿಗ್ನಲ್ ಹೋಗಬಹುದು ಅದನ್ನು ವಿಚಾರ ಮಾಡಬೇಕಾಗುತ್ತದೆ ಎಂದು ಹೇಳಿದರು. ನಾನು ಒಂದು ಉದಾಹರಣೆ ಕೊಡುತ್ತೇನೆ. ನಿನ್ನೆ ಕುಡಿಯುವ ನೀರಿನ ಸಮಸ್ಯೆ ಬಂತು; ಅದರ ಬಗ್ಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಇಚ್ಛಿಪಡುತ್ತೇನೆ. ಈ ವಿಚಾರವಾಗಿ ಎಲ್ಲಾ ಡಿ. ಸಿ. ಯವರಿಗೂ ನಮ್ಮ ಕಛೇರಿಯಿಂದ ಫ್ಯಾಕ್ಸ್ ಮಾಡಿದೆವು. ನಾವೇನು ಅಂತಹ ಮಾಹಿತಿ ಬೇಕೆಂದು ಕೇಳಿಲ್ಲ. ನಿಮಗೆ ಕುಡಿಯುವ ನೀರಿನ ಸಮಸ್ಯೆ ಸಲುವಾಗಿ ಎಷ್ಟು ಹಣ ಬಂದಿದೆ? ಎಲ್ಲೆಲ್ಲಿ ಪ್ರಾಬ್ಲಮ್ಯಾಟಿಕ್ ವಿಲೇಜಸ್ ಇವೆ, ಅದರ ಬಗ್ಗೆ ಡೀಟೈಲ್ಸ್ ಕೊಡಿ. ನೀವು ದುಡ್ಡು ಎಷ್ಟು ಕೇಳಿದ್ದೀರಿ? ಸರ್ಕಾರದಿಂದ ಎಷ್ಟು ಹಣ ಬಂದಿದೆ ಎಂದು ಕೇಳಿದರೆ ಒಂದಿಬ್ಬರು ಡಿ. ಸಿ. ಯವರು ಮಾತ್ರ ರೆಸ್ಪಾನ್ಸ್ ಕೊಟ್ಟರು; ಆದರೆ ಉಳಿದವರು ರೆಸ್ಪಾನ್ಸ್ ಕೊಟ್ಟಿಲ್ಲ ಎಂದರೆ ಇವತ್ತು ಅಧಿಕಾರಿಗಳ ಮೆಂಟಾಲಿಟಿ ಹೇಗೆ ಆಗಿದೆ ಎಂಬುದು ತಿಳಿಯುತ್ತದೆ. ನಾವು ಪ್ರತಿ ವರ್ಷ ನಾಯಕರು ಅಥವಾ ಸದಸ್ಯರು ಮಾಹಿತಿಯನ್ನು ಕೇಳುವಂತಹ ಹಕ್ಕು ನಮಗೆ ಇದೆಯೇ ಇಲ್ಲವೇ ಎನ್ನುವಂತಹ ಪ್ರಶ್ನೆ ಬರುತ್ತದೆ. ಏಕೆಂದರೆ ನಾವು ಯಾವುದೋ ಸೀಕ್ರೆಸಿ ಬಗ್ಗೆ ಮಾಹಿತಿ ಕೇಳುತ್ತಿಲ್ಲ. ಯಾವ್ಯಾವುದೋ ಇನ್‌ಫರ್ಮೇಷನ್ ಕೇಳುವುದು ಬೇರೆ. ಇವತ್ತು ಮಾಹಿತಿ ತಂತ್ರಜ್ಞಾನದಲ್ಲಿ ಮಾಹಿತಿ ಕೇಳುವ ಹಕ್ಕು ಇದೆ ಎನ್ನುವಂತಹ ಸಂದರ್ಭದಲ್ಲಿ ಅಧಿಕಾರಿಗಳ ಮೆಂಟಾಲಿಟಿ ಈ ರೀತಿ ಇದೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ಸೆಕ್ರೆಟರಿಯವರ ಆಫೀಸಿಗೆ ನಿನ್ನೆ ಮಾಹಿತಿ ಬಂದಿದೆ. ಆ ಮಾಹಿತಿಯನ್ನು ಇವತ್ತು ಬೆಳಿಗ್ಗೆ ಕಳುಹಿಸಿಕೊಡುತ್ತೇವೆ ಎಂದು ಹೇಳಿದರು. ನಾನೇ ಸ್ವತಃ ಫೋನ್ ಮಾಡಿ ನಮಗೆ ಕೇಳುವ ಹಕ್ಕು ಇದೆಯೋ ಇಲ್ಲವೋ ಎಂದಿದೆ. ಆದರೆ ಇವತ್ತು ಬೆಳಗಿನವರೆಗೂ ನಮಗೆ ಮಾಹಿತಿ ಬರಲಿಲ್ಲ. ನಿನ್ನೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ

ರೀತಿ ಮಾತನಾಡಿದಂತಹ ಸಂದರ್ಭದಲ್ಲಿ ಇದು ಯಾವ ರೀತಿ ಅವರಿಗೆ ಸಿಗ್ನಲ್ ಹೋಗುತ್ತದೆ? ಅದಕ್ಕೆ ಈ ಒಂದು ವ್ಯವಸ್ಥೆ ಬದಲು ಆಗಬೇಕಾಗಿದೆ. ಇಲ್ಲಿ ಪ್ರತಿಯೊಬ್ಬ ಸದಸ್ಯರಿಗೂ ಹಕ್ಕಿದೆ; ಜನರಿಂದ ಆರಿಸಿ ಬಂದಂತಹವರು ಶಾಸಕರು, ಎಲ್ಲರಿಗೂ ಕೂಡ ಮಾಹಿತಿ ಕೇಳುವಂತಹ, ಇಲ್ಲಿ ಮಾತನಾಡುವಂತಹ, ಚರ್ಚೆ ಮಾಡುವಂತಹ ಹಕ್ಕಿದೆ. ಅಂತಹ ಸಂದರ್ಭದಲ್ಲಿ ಈ ರೀತಿ ಮಾತುಗಳು ಬಂದಾಗ ಅಲ್ಲಿ ಯಾವ ಸಿಗ್ನಲ್ ಹೋಗುತ್ತದೆ? ಅಧಿಕಾರಿಗಳ ಮನಸ್ಸಿನಲ್ಲಿ ಶಾಸಕರ ಬಗ್ಗೆ ಯಾವ ಭಾವನೆಗಳು ಬರುತ್ತದೆ? ಆದುದರಿಂದ ಅದರ ಬಗ್ಗೆ ಚಿಂತನೆ ಆಗಬೇಕಾಗುತ್ತದೆ. ಮಾನ್ಯ ರಂಗನಾಥ್‌ರವರು ಈ ವಿಷಯದ ಬಗ್ಗೆ ಬೆಳಕನ್ನು ಚೆಲ್ಲಿದರು; ಸರಿಯಾದ ದಿಕ್ಕಿನಲ್ಲಿ ಅವರು ತಮ್ಮ ಮಾತುಗಳನ್ನು ಹೇಳಿದರು. ಆ ರೀತಿ ಎಲ್ಲರನ್ನೂ ಬರಬೇಕೆಂದು ನಮ್ಮ ಭಾವನೆ.

ಶ್ರೀ ಡಿ. ಎ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಮಾನ್ಯ ಸಿಂಧ್ಯಾರವರ ಮನಸ್ಸಿಗೆ ಆದ ನೋವಿನ ಬಗ್ಗೆ ಈ ಸದನದ ಕ್ಷಮೆ ಕೇಳಿದ್ದು ಅತ್ಯಂತ ದೊಡ್ಡ ವಿಚಾರ. ಏಕೆಂದರೆ ಅಷ್ಟೊಂದು ವಿಶಾಲ ಮನಸ್ಸಿನಿಂದ ಅವರು ಮಾತನಾಡಿದ್ದಾರೆ. ಆದರೆ ಇನ್ನೊಂದು ವಿಚಾರ ನಾವು ಗಮನಹರಿಸಬೇಕಾದ್ದು ಏನೆಂದರೆ, ಕೇವಲ ನಿನ್ನೆ ನಮ್ಮ ಆರ್‌ಡಿಪಿಆರ್ ಮಂತ್ರಿಗಳು ಮಾತ್ರ ಹೇಳಿದ್ದು ಅಲ್ಲ; ಅವರು ಹೇಳಿದ ಮಾತುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಅಕ್ಷರಶಃ ಎಂಡಾರ್ಸ್ ಮಾಡಿದ್ದಾರೆ. ನಾನು ನಮ್ಮ ಹಿರಿಯ ಸಚಿವರಲ್ಲಿ ಕೇಳುತ್ತಿದ್ದೇನೆ, ತಾವು ತಮ್ಮ ಹೃದಯ ವೈಶಾಲ್ಯದಿಂದ ಅವರಿಗೆ ಆದ ನೋವಿನ ಬಗ್ಗೆ ಕಳಕಳಿ ವ್ಯಕ್ತಪಡಿಸಿದಿರಿ. ಆದರೆ ಸನ್ಮಾನ್ಯ ಆರ್‌ಡಿಪಿಆರ್ ಮಂತ್ರಿಗಳು ಮಾತನಾಡಿದಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳು, ಅವರು ಹೇಳಿದ ಮಾತುಗಳನ್ನು ಅಕ್ಷರಶಃ ಎಂಡಾರ್ಸ್ ಮಾಡಿದ್ದೇನೆ ಎಂದು ಹೇಳುವುದರಿಂದ ಬಹುಶಃ ತಾವು ಹೇಳಿದ್ದು ಕೂಡ ಮಾನ್ಯ ಮುಖ್ಯಮಂತ್ರಿಗಳ ಮನಸ್ಸಿಗೆ ಆ ಭಾವನೆ ಹೋಗಿದೆಯೋ, ಇಲ್ಲವೋ ಅದನ್ನು ವಿಷದಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರೆಂದರೆ ನೀತಿ ಬಗ್ಗೆ ಎಂಡಾರ್ಸ್ ಮಾಡುತ್ತೇನೆಂದು ಹೇಳಿದರೆ ವಿನಃ ಮಾತಿನ ಬಗ್ಗೆ ಅಲ್ಲ. ಇನ್ನೊಂದು, ಮಾನ್ಯ ಫೋರ್ಪಡೆಯವರು ಇಲ್ಲಿ ಅತ್ಯಂತ ಹಿರಿಯ ಸದಸ್ಯರು. ನನಗಿಂತ ಒಂದು ಟರ್ಮ್ ಮುಂದೆ ಬಂದವರು. ಅವರು ಸ್ವಾಭಾವಿಕವಾಗಿ ಯಾರ ಹತ್ತಿರ ಮಾತನಾಡುವಾಗಲೂ ಕೂಡ ಬಹಳ ಕರ್ಚ್ಯುಯಸ್ ಆಗಿ ಇರತಕ್ಕಂಥ ವ್ಯಕ್ತಿ. ಅದು ಏನೋ ವಿಷ ಗಳಿಗೆ; ಅದನ್ನು ನಾವು ಪ್ರಸ್ತಾಪ ಮಾಡುವುದು ಬೇಡ. ತಾವು ನೀತಿಯ ಬಗ್ಗೆ ಪ್ರಸ್ತಾಪ ಮಾಡಿದಿರಿ. ಅದರ ಬಗ್ಗೆ ಪ್ರಸ್ತಾಪ ಮಾಡಬಹುದು. ಆ ಮಾತು ಬೇರೆ, ಆದರೆ ಮಾತಿನ ಬಗ್ಗೆ ಮಾನ್ಯ ಸಿಂಧ್ಯರವರು ಏನು ಪ್ರಸ್ತಾಪ ಮಾಡಿದರು ಅದರ ಬಗ್ಗೆ ಮಾತ್ರ ನಾನು ಹೇಳಿದೆ. ನೀತಿ ಬಗ್ಗೆ ತಾವು ಪ್ರಸ್ತಾಪ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಕೇಳಿ. ಈ ಕುಡಿಯುವ ನೀರಿನ ಬಗ್ಗೆ ನಮ್ಮ ಕ್ಷೇತ್ರದಲ್ಲಿ ಕೂಡ ತೊಂದರೆಯಾಗುತ್ತಿದೆ. 20 ಪಾಯಿಂಟ್ ಪ್ರೋಗ್ರಾಂ ಮಾಡುವಾಗ ನಾನು ಹೇಳುತ್ತಾ ಇದ್ದೆ. ಎಲ್ಲೆಲ್ಲಿ ಟ್ಯಾಂಕ್ಸ್ ಇದೆ, ಓವರ್‌ಹೆಡ್ ಟ್ಯಾಂಕ್ಸ್, ಪಂಪ್ಸ್, ಮಿನಿ ಟ್ಯಾಂಕ್ಸ್ ಇದೆ ಅದನ್ನು ವ್ಯವಸ್ಥಿತವಾಗಿ, ಹಂತಹಂತವಾಗಿ ಕನ್‌ವರ್ಟ್ ಮಾಡಬೇಕೆನ್ನುವ ಅಭಿಪ್ರಾಯ

ಬಂದಿದೆ. ಅದು ಸರ್ಕಾರದ ನೀತಿ ಕೂಡ ಹಾಗೆಯೇ ಇದೆ. ಹೀಗಾಗಿ ತಾವು ಪ್ರಸ್ತಾಪ ಮಾಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಮಾತಿನ ಬಗ್ಗೆ ಅಷ್ಟೇ ನಾನು ಪ್ರಸ್ತಾಪ ಮಾಡಿದ್ದು. ನೀತಿ ಬಗ್ಗೆ ತಾವು ಪ್ರಸ್ತಾಪ ಮಾಡಿ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ತೆಗೆದುಕೊಳ್ಳಿ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ.....

Mr. Speaker : No. Everybody wants to speak on this subject. We have to take up question hour. I am very sorry. ನಿಮ್ಮ ನಾಯಕರು ಮಾತನಾಡಿದ್ದಾರೆ. ಎಲ್ಲರೂ ಮಾತನಾಡುವುದು ಬೇಡ; ಸಾಕು ಮಾತನಾಡಿದ್ದುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇಡೀ ಸದನಕ್ಕೆ ಅಗೌರವ ಆಗುವ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಅವರು ಗೌರವಾನ್ವಿತ ಸದಸ್ಯರು. ಪ್ರತಿಯೊಬ್ಬರಿಗೂ ಅವಮಾನ ಆಗುವ ರೀತಿಯಲ್ಲಿ ನಡೆದುಕೊಂಡಿದ್ದಾರೆ.

ಅಧ್ಯಕ್ಷರು : ಮಾನ್ಯ ರಂಗನಾಥ್‌ರವರು ವಿಷಾದ ವ್ಯಕ್ತಪಡಿಸಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರ ಬಗ್ಗೆ ನಮಗೆ ಗೌರವ ಇದೆ. ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ನಡೆದುಕೊಂಡ ರೀತಿ ಇದೆಯಲ್ಲ ಅದು ಇಡೀ ಸದನಕ್ಕೆ ಅಗೌರವ ತಂದಿದೆ. ಇನ್ನು ಮೇಲೆ ಈ ರೀತಿಯಾಗಬಾರದು ಎಂದು ನನ್ನ ವಿನಂತಿ.

ಅಧ್ಯಕ್ಷರು : ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ಸಿಂಧ್ಯ ಅವರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಏನು ಮಾತು ಆಡಿದ್ದರು ಎನ್ನುವ ವಿಚಾರದಲ್ಲಿ ಶ್ರೀಮಾನ್ ರಂಗನಾಥ್ ಅವರು ಒಪ್ಪಿಕೊಂಡು ವಿಷಾದ ವ್ಯಕ್ತಪಡಿಸಿದ್ದಾರೆ. ಈಗ ಇದನ್ನು ಇಲ್ಲಿಗೆ ಸಾಕು ಮಾಡೋಣ.

ಶ್ರೀ ಕೆ. ಹೆಚ್. ರಂಗನಾಥ್ : ಆ ಬಗ್ಗೆ ನಾನು ಕ್ಷಮೆ ವ್ಯಕ್ತ ಮಾಡಿದ್ದೇನೆ. ಬರೀ ವಿಷಾದ ಅಲ್ಲ.

ಅಧ್ಯಕ್ಷರು : ಅವರು ಈ ಸದನದ ಕ್ಷಮೆ ಕೋರಿದ್ದಾರೆ. ಅದರ ಬಗ್ಗೆ ಹೆಚ್ಚಿಗೆ ಮಾತನಾಡುವುದು ಬೇಡ. ನೀರಿನ ವಿಷಯದ ಬಗ್ಗೆ ರಾಜ್ಯಪಾಲರ ಭಾಷಣದ ಬಗ್ಗೆ ಈಗ ನಾವು 12 ಗಂಟೆಗೆ ಬಿ. ಎ. ಸಿ ಮೀಟಿಂಗ್ ಕರೆದಿದ್ದೇವೆ. ಅಲ್ಲಿ ನಾವು ಅದರ ಬಗ್ಗೆ ಡಿಸಿಷನ್ ತೆಗೆದುಕೊಳ್ಳೋಣ. ಈಗ 15 ಪ್ರಶ್ನೆಗಳಲ್ಲಿ 14 ಪ್ರಶ್ನೆಗಳಿಗೆ ಉತ್ತರ ಬಂದಿದೆ. ಸಪ್ಲಿಮೆಂಟರಿ ಕೇಳುವವರು ಆಯಾಯ ಕ್ಷೇತ್ರಕ್ಕೆ ಸಂಬಂಧಪಟ್ಟರೆ ಮಾತ್ರ ಕೇಳಿ. ಜನರಲ್ ಆಗಿದ್ದರೆ ಒಂದೆರಡು ಸೆಂಟೆನ್ಸ್ ಮಾತ್ರ ಕೇಳಿ. ಈಗ ಮೊದಲು ಸಿಂಧ್ಯರವರ ಪ್ರಶ್ನೆ.

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ : ಮಾನ್ಯ ಅಧ್ಯಕ್ಷರೆ, ಮೊದಲು ನನ್ನ ಪ್ರಶ್ನೆ ಇದೆ.

ಅಧ್ಯಕ್ಷರು : ತಮ್ಮ ಪ್ರಶ್ನೆಗೆ 20 ದಿವಸ ಟೈಂ ಕೇಳಿದ್ದಾರೆ.

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ : ನನ್ನ ನಾಲ್ಕು ಚುಕ್ಕೆ ಗುರುತಿನ ಪ್ರಶ್ನೆಗಳು ಬಂದವು. ಆದರೆ ಒಂದಕ್ಕೂ ಸರ್ಕಾರದವರು ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು : ಸರ್ಕಾರದವರು ಟೈಂ ಕೇಳಿದ್ದಾರೆ.